# ಹಳೆ ಸೀರೆಗೆ ಹೊಸ ಲುಕ್



**ಬೆಲೆಬಾಳುವ ರೇಷ್ಮೆ ಸೀರೆಯೇ ಇರಲಿ, ಸಾದಾ ಸೀರೆಯೇ ಆಗಿರಲಿ ನಾಲ್ಕೈದು ಬಾರಿ ಉಟ್ಟಾಗ ಮತ್ತೆ ಅದನ್ನೇ ಉಡಲು ಬೇಜಾರಾಗಬಹುದು. ಹಲವು ವರ್ಷಗಳ ಕಾಲ ಸೀರೆಗಳು ತಿಜೋರಿಯಲ್ಲೇ ಇಟ್ಟಿರಬಹುದು. ಅವನ್ನೆಲ್ಲ ಈಗಿನ ಟ್ರೆಂಡ್‌ಗೆ ತಕ್ಕಂತೆ ಡ್ರೆಸ್ ರೂಪಕ್ಕೆ ಮಾರ್ಪಡಿಸಿ ಧರಿಸಿದರೆ ಎಲಿಗೆಂಟ್ ಲುಕ್ ಅನ್ನೂ ಪಡೆಯಬಹುದು.**

■ **ಕೃಷ್ಣಿ ಶಿರೂರ**
ಚಿತ್ರಗಳು: ಗೋವಿಂದರಾಜ ಜವಳಿ

ರಶ್ಮಿ ತನ್ನ ಮೊದಲ ಸಂಬಳದಲ್ಲಿ ಖರೀದಿಸಿದ ಸೀರೆ ಆಕೆಗೆ ಹಳೆಯದೆನಿಸಿತ್ತು. ಹಾಗಂತ ಅದನ್ನು ಅಗತ್ಯವಿದ್ದವರಿಗೆ ಕೊಡಲು ಅವರಿಗೆ ಮನಸ್ಸಿಲ್ಲ. ಕಾರಣ ಮೊದಲ ಸಂಬಳದಲ್ಲಿ ಖರೀದಿಸಿದ ಸೀರೆ ಅನ್ನೋ ಭಾವನಾತ್ಮಕ ಸಂಬಂಧ, ನೆನಪುಗಳು ಆ ಸೀರೆಯೊಂದಿಗೆ ಬೆಸೆದಿತ್ತು. ಇದೇ ಕಾರಣಕ್ಕೆ ಎರಡೂವರೆ ದಶಕಗಳಿಂದ ತಿಜೋರಿಯ ಮೂಲೆಯಲ್ಲಿ ಆ ಸೀರೆ ಮುದುಡಿ ಬಿದ್ದಿತ್ತು.

***

ಅರ್ಪಿತಾಗೆ ಬಾಂದನಿ ಸೀರೆ ಜರಿಗಳಿಂದ ಬಲುಭಾರವೆನಿಸಿತ್ತು. ಅದನ್ನು ಉಟ್ಟರೆ ಪುಟ್ಟ ಮಗಳಿಗೆ ಚುಚ್ಚುವ ಆತಂಕ. ಆದರೂ ಅದನ್ನು ಕಳೆದುಕೊಳ್ಳಲು ಮನಸ್ಸಿರಲಿಲ್ಲ. ಅದೇ ಕಾರಣಕ್ಕೆ ಸೀರೆ ಕಪಾಟಿನೊಳಗೆ ಹ್ಯಾಂಗರ್‌ನಲ್ಲಿ ಜೋತು ಹೊಡೆದಿತ್ತು.

***

ಕಾಜಲ್‌ಗೆ ಪತಿ ಮನೆಯಲ್ಲಿ ಕೊಟ್ಟ ಮೊದಲ ಸೀರೆ ಅನ್ನೋ ಭಾವನಾತ್ಮಕ ಗಳಿಗೆಗೆ ತಳುಕು ಹಾಕಿರುವ ಸೀರೆಯನ್ನು ಇನ್ನೊಬ್ಬರಿಗೆ ಕೊಡಲು ಇಷ್ಟವಿರಲಿಲ್ಲ. ಹಾಗೇ ಶಯಾಲಿಗೆ ಆಪ್ತರೊಬ್ಬರು ಕೊಟ್ಟ ಸೀರೆಯನ್ನು ಬೇರೆ ಯಾರಿಗೋ ಕೊಡಲು ಮನಸ್ಸೇ ಬರಲಿಲ್ಲ.

***

ಮೇಲಿನ ಇಷ್ಟೂ ಉದಾಹರಣೆಗಳೂ ಸೀರೆಯೊಂದಿಗೆ ಮಹಿಳೆಯರಿಗೆ ಇರುವ ಅವಿನಾಭಾವ ಹಾಗೂ ಭಾವನಾತ್ಮಕ ಸಂಬಂಧಕ್ಕೆ ಸಂಬಂಧಿಸಿದ್ದು. ಹೀಗೆ ಒಂದಿಲ್ಲೊಂದು ಸೀರೆ ಪುರಾಣ ಈ ಹೆಣ್ಮಕ್ಕಳ ನೆನಪಿನೊಟ್ಟಿಗೆ ಗಟ್ಟಿಯಾಗಿತ್ತು. ಇಂಥ ನೆನಪುಗಳೊಂದಿಗೆ ಮೂಟೆಕಟ್ಟಿ ಮೂಲೆ ಸೇರಿದ ಸೀರೆಗಳಿಗೆ ಹೊಸ ಲುಕ್ ಕೊಟ್ಟು ಅದನ್ನು ಉತ್ಸಾಹದಿಂದ ಧರಿಸುವಂತೆ ವಿನ್ಯಾಸಗೊಳಿಸಿದರೆ ಸೀರೆಯೊಂದಿಗೆ ಬಾಂಧವ್ಯವೂ ಅಳಿಯದು,